

# ಕನ್ನಡ ವೇದಿಕೆ

ಪೂರಕ ಪಾಠ

## ಗುಣಸಾಗರಿ ಪಂಡರಿಬಾಯಿ   ಜಯಮಾಲಾ

---

ಜಯಮಾಲಾ  ಅವರು ದಕ್ಷಿಣ ಕನ್ನಡ ಜಿಲ್ಲೆಯ ಪಣಂಬೂರಿನಲ್ಲಿ **28-02-1959**ರಲ್ಲಿ ಜನಿಸಿದರು . ಕರ್ನಾಟಕ ನಿರಾಶ್ರಿತ ಮಹಿಳೆಯರ ಪುರರ್ವಸತಿ ಆಡಳಿತ ವ್ಯವಸ್ಥೆಯ ಒಂದು ಅದ್ಯಯನ ಈ ವಿಷಯದಡಿಯಲ್ಲಿ ಪಿ. ಹೆಚ್ .ಡಿ ಪದವಿಯನ್ನು ಪಡೆದಿದ್ದಾರೆ. ನಾಯಕಿಯಾಗಿ ಹಲವಾರು ಚಿತ್ರಗಳಲ್ಲಿ ನಟಿಸಿದ್ದಾರೆ . ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ರಾಜ್ಯ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ಕೇಂದ್ರ ಸರ್ಕಾರ ಚಲನಚಿತ್ರ ಆಯ್ಕೆ ಸಮಿತಿಯ ಸದಸ್ಯರಾಗಿ ಹೀಗೆ ವಿವಿಧ ವಲಯಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ . ಅವರು  ನಿರ್ಮಿಸಿ ನಟಿಸಿದ ತಾಯಿ ಸಾಹೇಬ ಚಿತ್ರಕ್ಕೆ  ಸ್ವರ್ಣ ಕಮಲ ಪ್ರಶಸ್ತಿ, ಅಭಿನಯಕ್ಕೆ ವಿಶೇಷ ರಾಷ್ಟ್ರ ಪ್ರಶಸ್ತಿ ಅತ್ಯುತ್ತಮ ನಟಿ , ಅತ್ಯುತ್ತಮ ಚಿತ್ರ ಫಿಲಂ ಫೇರ್ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ . ಇದಲ್ಲದೆ ರಾಜೀವ್ ಗಾಂಧಿ , ರಾಷ್ಟ್ರೀಯ ಸೌಹಾರ್ದ ಪ್ರಶಸ್ತಿ , ಕನ್ನಡ ರಾಜ್ಯೋತ್ಸವ ಪ್ರಶಸ್ತಿ , ಶಾಂತಾರಾಮ್ ಗ್ಲೋಬಲ್ ಮ್ಯಾನ್ ಪ್ರಶಸ್ತಿ ಹೀಗೆ ಹತ್ತು ಹಲವು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ . ಜಯಮಾಲಾ ಅವರು ಬರೆದಿರುವ ಸಂಕ್ಷಿಪ್ತ ರೂಪವಾಗಿದೆ.

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ .

1. ಪಂಡರಿಬಾಯಿ ಅವರ ತಂದೆ-ತಾಯಿಯರ ಹೆಸರೇನು ?

   ಪಂಡರಿಬಾಯಿ ಅವರ ತಂದೆ ರಂಗರಾವ್ ಮತ್ತು ಕಾವೇರಿಬಾಯಿ

2. ಪಂಡರಿಬಾಯಿಯವರು ನಟಿಸಿದ ಮೊದಲ ಚಿತ್ರದ ಹೆಸರೇನು ?

   ಪಂಡರಿಬಾಯಿಯವರು ನಟಿಸಿದ ಮೊದಲ ಚಿತ್ರ  ವಾಣಿ

3. ಪಂಡರಿಬಾಯಿ ನಾಟಕರಂಗಕ್ಕೆ ಪ್ರವೇಶಿಸಬೇಕಾಗಿ ಬಂದದ್ದು ಯಾಕೆ ?

   ಆದರ್ಶ ನಾಟಕ ಸಂಘ ಪ್ರದರ್ಶಿಸುತ್ತಿದ್ದ ನಾಟಕದಲ್ಲಿ ಅಭಿನಯಿಸುತ್ತಿದ್ದ ನಟಿ ಇನ್ನೇನು ನಾಟಕ ಆರಂಭಕ್ಕೆ ಅರ್ಧಗಂಟೆ ಬಾಕಿ ಇರುವಾಗ ನಾನು ಬರುವುದಿಲ್ಲ ಎಂಬ ಸುದ್ದಿ ಕಳುಹಿಸಿದಳು. ನಾಟಕದ ಟಿಕೆಟುಗಳ ಪೂರ್ತಿ ಮಾರಾಟವಾಗಿದ್ದವು. ನಾಟಕ ನಿಂತರೆ ಕುಟುಂಬ ಬಹುದೊಡ್ಡ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತಿತ್ತು . ಹಾಗಾಗಿ ನಟಿಯ ಪಾತ್ರವನ್ನು ತಂಗಿ ಪಂಡರಿಬಾಯಿ ಏಕೆ ಮಾಡಿಸಬಾರದು ಎಂಬ ಆಲೋಚನೆ ಅಣ್ಣ

ವಿಮಲ್ ಆನಂದನಿಗೆ ಬಂತು . ಆದ್ದರಿಂದ ಪಂಡರಿಬಾಯಿ ಅವರು ನಾಟಕದಲ್ಲಿ ನಟಿಸುವ ಮೂಲಕ ನಾಟಕ ರಂಗ ಪ್ರವೇಶಿಸಿದರು.

4. ಪಂಡರಿಬಾಯಿ ಅವರಿಗೆ ಜೀವಮಾನ ಸಾಧನೆಗಾಗಿ ಯಾವ ಪ್ರಶಸ್ತಿಯನ್ನು ನೀಡಲಾಗಿದೆ ?
   ಪಂಡರಿಬಾಯಿ ಅವರಿಗೆ ಜೀವಮಾನ ಸಾಧನೆಗಾಗಿ 2000ದಲ್ಲಿ ಫಿಲ್ಮ್ ಫೇರ್ ಪ್ರಶಸ್ತಿಯನ್ನು ನೀಡಲಾಗಿದೆ.
5. ಪಂಡರಿಬಾಯಿಯವರು ಯಾರ ಮನಸ್ಸಿನಲ್ಲಿ ಅಮರರಾದರು ?
   ಪಂಡರಿಬಾಯಿಯವರು ಕಲಾ ರಸಿಕರ ಮನಸ್ಸಿನಲ್ಲಿ ಅಮರರಾದರು .

6. ಪಂಡರಿಬಾಯಿಯವರು ನಾಟಕದಲ್ಲಿ ಬಣ್ಣಹಚ್ಚಲು ಕಾರಣವೇನು ?
7. ಪಂಡರೀಬಾಯಿಯವರಿಗೆ ಆಕಸ್ಮಿಕವಾಗಿ ಮದುವೆ ನಾಟಕದಲ್ಲಿ ಬಣ್ಣ ಹಚ್ಚುವ ಸನ್ನಿವೇಶ ಎದುರಾಯಿತು . ಆದರ್ಶ ನಾಟಕ ಸಂಘ ಸಂಘ ಪ್ರದರ್ಶಿಸುತ್ತಿದ್ದ ನಾಟಕದಲ್ಲಿ ಅಭಿನಯಿಸುತ್ತಿದ್ದ ಪ್ರಾರಂಭವಾಗುವ ಅರ್ಧ ಗಂಟೆ ಮುಂಚಿತವಾಗಿ ನಟಿ ಬರುವುದಿಲ್ಲ ಎಂದು ಸುದ್ದಿಯನ್ನು ಕಳುಹಿಸಿದಳು. ನಾಟಕದ ಟಿಕೆಟುಗಳು ಎಲ್ಲವೂ ಮಾರಾಟವಾಗಿದ್ದವು .ನಾಟಕ ನಡೆಯಲ್ಲಿಲ್ಲವೆಂದರೆ ಕುಟುಂಬ ಬಹುದೊಡ್ಡ ಕಷ್ಟಕ್ಕೆ ಸಿಲುಕಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಟಿಯ ಪಾತ್ರವನ್ನು ತಂಗಿಯಾದ ಪಂಡರಿಬಾಯಿಯಯಿಂದ ಏಕೆ ಮಾಡಬಾರದು ಎಂಬ ಆಲೋಚನೆ ಅಣ್ಣ ವಿಮಲ್ ಆನಂದನಿಗೆ ಬಂತು ಹಾಗಾಗಿ ಪಂಡರಿಬಾಯಿಯವರು ನಾಟಕದಲ್ಲಿ ಬಣ್ಣಹಚ್ಚಲು ಕಾರಣವಾಯಿತು.

8. ರಂಗರಾವ್ ಅವರು ಮಗಳ ಹೆಸರನ್ನು ಪಂಡರಿಬಾಯಿ ಎಂದು ಬದಲಾಯಿಸಲು ಕಾರಣವೇನು? ರಂಗರಾವ್ ಅವರು ಪಂಡರಾಪುರದ ಪಂಡರಿನಾಥನಲ್ಲಿ ಅತೀವ ಶ್ರದ್ಧೆ ಮತ್ತು ಭಕ್ತಿಯನ್ನು ಹೊಂದಿದ್ದ ಕಾರಣ ಗೀತಾ ಹೆಸರನ್ನು ಪಂಡರಿಬಾಯಿ ಎಂದು ಬದಲಿಸಿದರು .

9. ಪಂಡರೀಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು ?
   ಚಿಕ್ಕಂದಿನಿಂದಲೇ ಅವರಿಗೆ ಸಂಗೀತ ಅಭ್ಯಾಸವಾಗಿತ್ತು . ಹರಿಕಥೆ ಮಾಡುವುದನ್ನು ಹಾಗೂ ಕೀರ್ತನೆ ಹಾಡುವುದನ್ನು ಇವರು ಕಲಿತಿದ್ದರು. ಅಲ್ಲದೆ ಮನೆಯಲ್ಲಿದ್ದ ಸೃಜನಶೀಲ ವಾತಾವರಣ ಪಂಡರಿಬಾಯಿಯವರ ಕಲಾವಿದೆ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು .

10. ಪಂಡರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು?
    ಅವರಲ್ಲಿದ್ದ ಪ್ರತಿಭೆ ಅಂತಃಕರಣ ಮತ್ತು ಹೃದಯ ಶ್ರೀಮಂತಿಕೆ ಅಪರೂಪದ ಕಲಾವಿದೆಯಾಗಿ ರೂಪುಗೊಳ್ಳಲು ಸಹಾಯಕವಾಯಿತು.